ಕರ್ನಾಟಕ ಸರ್ಕಾರ

ಸಂಖ್ಯೆ: ಆಯವ್ಯಯ/ಬಿ-1/ಶಿ.ವೇ.ಪಾ-03/2016-17

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:01-10-2016

ಇವರಿಂದ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಶಿಕ್ಷಣ ಇಲಾಖೆ,(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001.

ಇವರಿಗೆ,
ನಿರ್ದೇಶಕರು,
ಖಜಾನೆ ನಿರ್ದೇಶನಾಲಯ,
ಪೋಡಿಯಂ ಬ್ಲಾಕ್, ವಿವಿ ಗೋಪುರ,
ಬೆಂಗಳೂರು.

ಮಾನ್ಯರೆ,

ವಿಷಯ: ಶಿಕ್ಷಣ ಇಲಾಖೆಯ ವೇತನ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಶಿಕ್ಷಕರ/ಸಿಬ್ಬಂದಿಗಳ ವೇತನವನ್ನು ಸಕಾಲಕ್ಕೆ ಸಿದ್ದಪಡಿಸಿ, ಪಾವತಿಸುವ ಬಗ್ಗೆ.

************

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವೇತನ ಸೆಳೆಯುವ ಬಟವಾಡೆ ಅಧಿಕಾರಿಗಳು ಸಕಾಲದಲ್ಲಿ ತಮ್ಮ ಅಧೀನದಲ್ಲಿ ಬರುವ ಸಿಬ್ಬಂದಿ/ಶಿಕ್ಷಕರ ವೇತನವನ್ನು HRMS ನಲ್ಲಿ ಸಿದ್ದಪಡಿಸಿ ಸಕಾಲದಲ್ಲಿ ವೇತನವನ್ನು ಪಾವತಿಸದಿರುವುದು ಕಂಡು ಬರುತ್ತಿದೆ. ಶಿಕ್ಷಕರ ವೇತನ ಪಾವತಿಯು ಅತ್ಯಂತ ಗಂಭೀರವಾದ ವಿಚಾರವಾಗಿದ್ದು, ವೇತನ ಸಕಾಲಕ್ಕೆ ಪಾವತಿಯಾಗದಿರುವ ಬಗ್ಗೆ ಹಲವಾರು ಆಕ್ಷೇಪಣೆಗಳು ಬರುತ್ತಿವೆ. ಶಾಸನ ಸಭೆಯಲ್ಲಿಯೂ ಈ ಬಗ್ಗೆ ಚರ್ಚಿಸಲಾಗುತ್ತದೆ. ಹಲವು ವೇತನ ಸೆಳೆಯುವ ಅಧಿಕಾರಿಗಳು ವೇತನ ಪಾವತಿಸಲು ಅನಗತ್ಯವಾಗಿ ವಿಳಂಬ ಮಾಡುತ್ತಿರುವುದು ಕಂಡು ಬರುತ್ತದೆ.

ಈ ಹಿನ್ನಲೆಯಲ್ಲಿ ಇನ್ನು ಮುಂದೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವೇತನ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳು **ಕಡ್ಡಾಯವಾಗಿ ಪ್ರತಿ ತಿಂಗಳು ಎಲ್ಲಾ ಸಿಬ್ಬಂದಿಯ/ಶಿಕ್ಷಕರ ಆಯಾ ತಿಂಗಳ ವೇತನ ಬಿಲ್ಲುಗಳನ್ನು HRMS ನಲ್ಲಿ ಅದೇ ತಿಂಗಳು ಸೆಳೆಯುವುದು ಹಾಗೂ ಬಹಳ ಮುಖ್ಯವಾಗಿ ಹೊಸದಾಗಿ ಪ್ರಾಥಮಿಕ ಶಾಲೆಗಳಿಗೆ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ವೇತನವನ್ನು ಕೂಡಲೇ ಪಾವತಿಸಲು ಕ್ರಮ ವಹಿಸುವುದು.** ತಮ್ಮ ವ್ಯಾಪ್ತಿಯ ಎಲ್ಲಾ ಸಿಬ್ಬಂದಿ/ಶಿಕ್ಷಕರ ವೇತನವನ್ನು ಪಾವತಿಸಲಾಗಿದೆ ಎಂಬ ಧೃಢೀಕರಣ ನೀಡಿದ ನಂತರವೇ ತಮ್ಮ ವೇತನ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸುವುದು.

ಒಂದು ವೇಳೆ ಎಲ್ಲಾ ಸಿಬ್ಬಂದಿಗಳ ವೇತನವನ್ನು ಸೆಳೆದು ಪಾವತಿಸಿದ ಬಗ್ಗೆ ಧೃಢೀಕರಣವನ್ನು ನೀಡದಿದ್ದಲ್ಲಿ ಅಂತಹ ವೇತನ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಗಳ ಅಂದರೆ ಜಿಲ್ಲಾ ಉಪನಿರ್ದೇಶಕರ/ಪತ್ರಾಂಕಿತ ಸಹಾಯಕರು/ವ್ಯವಸ್ಥಾಪಕರು ಮತ್ತು ಸಂಬಂಧಿಸಿದ ವಿಷಯ ನಿರ್ವಾಹಕರ ಹಾಗೂ ಕ್ಷೇತ್ರಶಿಕ್ಷಣಾಧಿಕಾರಿಗಳು/ವ್ಯವಸ್ಥಾಪಕರು/ಸಂಬಂದಿಸಿದ ವಿಷಯ ನಿರ್ವಾಹಕರುಗಳ ಮತ್ತು ಸರ್ಕಾರಿ ಪ್ರೌಢಶಾಲೆಗಳ ಮುಖ್ಯಶಿಕ್ಷಕರುಗಳ ಅಕ್ಟೋಬರ್ 2016 ರ ಮಾಹೆಯಿಂದ ವೇತನವನ್ನು ತಡೆಹಿಡಿಯುವಂತೆ ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಖಜಾನಾಧಿಕಾರಿಗಳಿಗೆ ನಿರ್ದೇಶನ ನೀಡಬೇಕಾಗಿ ಕೋರಿದೆ.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಪ್ರತಿಯನ್ನು:

*01.* ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

*02.* ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರಿಗೆ ಸೂಕ್ತ ಕ್ರಮಕ್ಕಾಗಿ.

*03.* ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ಆರ್.ಎಮ್.ಎಸ್.ಎ ರವರಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.

*04.* ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.

*05.* ನಿರ್ದೇಶಕರು, [ಪ್ರಾಥಮಿಕ ಶಿಕ್ಷಣ] ಮತ್ತು [ಪ್ರೌಡ ಶಿಕ್ಷಣ], ಆಯುಕ್ತರ ಕಛೇರಿ, ಡಿ.ಎಸ್.ಇ.ಆರ್.ಟಿ./ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ಭಾಷಾ ಅಲ್ಪ ಸಂಖ್ಯಾತ ನಿರ್ದೇಶನಾಲಯ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

*06.* ಜಂಟಿ ನಿರ್ದೇಶಕರು, (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು, ಸಹ ನಿದೇಶಕರು ಬೆಂಗಳೂರು/ಮೈಸೂರು/ಬೆಳಗಾವಿ, ಸಹ ನಿದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು.

*07.* ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಅಗತ್ಯ ಕ್ರಮಕ್ಕಾಗಿ

*08.* ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಪ್ರೌಢ ಮುಖ್ಯಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಜಿಲ್ಲಾ ಉಪನಿರ್ದೇಶಕರ ಮುಖಾಂತರ.